O.S. ನಂಬರಃ 34/2020
ಡಿ. ಡಬ್ಲ್ಯೂಃ 1

ದಿಃ 13-03-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ವಾದಿಯ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

ನಮ್ಮ ಮನೆಯು ಸರ್ವೆ ನಂ.298 ರಲ್ಲಿ ಇರುತ್ತದೆ. ಅದೇ ಸರ್ವೆ ನಂಬರಿನಲ್ಲಿ 1ನೇ ಪ್ರತಿವಾದಿ ಹಾಗೂ ಮಂಜುನಾಥ ಗಣಪತಿ ನಾಯ್ಕ ಇವರ ಮನೆ ಇರುತ್ತದೆ. ವಾದಿಯ ಮನೆಯು ಸಹ ಅದೇ ಸರ್ವೆ ನಂ. 298 ರಲ್ಲಿ ಇರುತ್ತದೆ. ದಾವಾ ಆಸ್ತಿ ಸರ್ವೆ ನಂ.298 ರಲ್ಲಿ ನಾವು ಸ್ವಾಧೀನದಲ್ಲಿರುವ ಮನೆಯನ್ನು ಹೊರತುಪಡಿಸಿ ಉಳಿದ ಮನೆಗಳಲ್ಲಿ ನಾವು ಪಾಲು ಕೇಳುವುದಿಲ್ಲ. ಸದರಿ ಸರ್ವೆ ನಂ.298 ರಲ್ಲಿ ನಾವು ಮನೆಯನ್ನು ನಿರ್ಮಾಣ ಮಾಡುವಾಗ ನಮ್ಮ ಮನೆಯ ಸುತ್ತಮುತ್ತಲಿನ ಗಡಿಯನ್ನು ನಿರ್ಧರಿಸಿರುತ್ತೇವೆ ಎಂದರೆ ಸರಿ. ಅದೇ ರೀತಿ ದಿನ್ನಾ ಬೀರಪ್ಪ ನಾಯ್ಕ ಮತ್ತು ಗಣಪತಿ ಬೀರಪ್ಪ ನಾಯ್ಕ ಇವರು ಮನೆಗಳನ್ನು ನಿರ್ಮಾಣ ಮಾಡುವಾಗ ಗಡಿಗಳನ್ನು ತೋರಿಸಿ ಆ ಪ್ರಕಾರ ಮನೆ ನಿರ್ಮಾಣ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸರ್ವೆ ಮಾಡಿರುವುದಿಲ್ಲ ಎಂದು ಉತ್ತರಿಸುತ್ತಾರೆ.

2. ಬೀರಪ್ಪನಿಗೆ ದಿನ್ನಾ, ಬೊಬ್ರಿ ಮತ್ತು ಗಣಪತಿ ಎನ್ನುವ 3 ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ದಾವೆ ವಾದಪತ್ರದಲ್ಲಿ ಕಾಣಿಸಿದ ವಂಶಾವಳಿಯು ಸರಿ ಇರುತ್ತದೆ ಎಂದರೆ ಸರಿ. ನಿಡಿ-2 ರಲ್ಲಿ ಕಾಣುವ ದಾರಿಯು 2 ಅಡಿ ಅಗಲ ಇರುತ್ತದೆ. ಸಾಕ್ಷಿಯು ಸ್ವತಃ ಸದರಿ ರಸ್ತೆ ನಮ್ಮ ಜಮೀನಿನಲ್ಲಿ ಇರುವುದಿಲ್ಲ, ಬದಲಾಗಿ ಬೇರೆಯವರ ಜಮೀನಿನಲ್ಲಿ ಇದ್ದು, ಅದರಲ್ಲಿ ನಾವು ಓಡಾಡುತ್ತೇವೆ ಎಂದು ನುಡಿಯುತ್ತಾರೆ. ಸದರಿ ಕಾಲುದಾರಿಯಲ್ಲಿ ನಾವು ಹುಟ್ಟಿದಾಗಿನಿಂದಲೇ ಓಡಾಡುತ್ತಿದ್ದೇವೆ. ಸದರಿ ನಿಡಿ-2 ರಲ್ಲಿ ಕಾಣುವ ರಸ್ತೆಯ ಎಡಭಾಗದ ಆವರಣಗೋಡೆಯ ಜಮೀನು ಓರ್ವ ಬಾಲಕೃಷ್ಣ ನಾಯ್ಕ ಇವರಿಗೆ ಸೇರಿದ ಜಮೀನು ಆಗಿರುತ್ತದೆ. ಬಲಗಡೆಗೆ ಕಾಣುವ ಜಮೀನು ನಮಗೆ ಸೇರಿದ್ದು ಇರುತ್ತದೆ. ಸದರಿ ಕಾಲುದಾರಿಯು ನಮ್ಮ ಜಮೀನಿನಲ್ಲಿರುವ ಕಾಲುದಾರಿ ಎಂದರೆ ಸರಿಯಲ್ಲ. ಸದರಿ ಕಾಲುದಾರಿಯ ಲಗ್ತ ಜಮೀನನ್ನು ನಮ್ಮ ಹಿಸ್ಸೆಗೆ ಕೊಟ್ಟರೆ ಮುಂದೆ ಸದರಿ ಕಾಲುದಾರಿ ರಸ್ತೆಯನ್ನು ವಿಸ್ತರಿಸಿ, ನಮಗೆ ಬೇಕಾದ ಹಾಗೆ ಅಗಲದ ರಸ್ತೆ ಮಾಡಬಹುದು ಎಂದರೆ ಸರಿ. ಸದರಿ ನಿಡಿ-2 ರಲ್ಲಿ ಕಾಣುವ ರಸ್ತೆಯನ್ನು ಹೊರತುಪಡಿಸಿ, ಬೇರೆ ರಸ್ತೆ ಸಂಪರ್ಕ ನಮಗೆ ಇರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವಂತೆ ಸಾರ್ವಜನಿಕ ರಸ್ತೆ ಇದೆ, ಆದರೆ ದಾಖಲೆಗಳು ಇರುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನಾವು ಮೂವರು ಜನ ಸಹೋದರರು ಅಂದರೆ ದಿನ್ನಾ, ಬೊಬ್ರಿ ಮತ್ತು ಗಣಪತಿ ಸಾರ್ವಜನಿಕರಿಗೆ ಓಡಾಡಲು 5 ಅಡಿ ಅಗಲದ ರಸ್ತೆಯನ್ನು ಗ್ರಾಮಪಂಚಾಯತಿಗೆ ಬರೆದುಕೊಟ್ಟಿರುತ್ತೇವೆ. ಆದರೆ ಈ ಬಗ್ಗೆ ಪಂಚಾಯತಿಗೆ ನಾನು, ಗೋವಿಂದ ಮತ್ತು ಮಂಜುನಾಥ ನಾಯ್ಕ ಇವರು ಬಾಂಡ್ ಬರೆದುಕೊಟ್ಟಿರುತ್ತೇವೆ

ಎಂದು ಸಾಕ್ಷಿಯು ನುಡಿಯುತ್ತಾರೆ. ಸದರಿ ಬಾಂಡ್ ಯಾವಾಗ ಬರೆದುಕೊಟ್ಟಿರುತ್ತೇವೆ ಎಂದು ನೆನಪಿರುವುದಿಲ್ಲ. ಸದರಿ ಬಾಂಡ್ ಮಾಡಿಕೊಡಲು ನಾವು ಉಳಿದ ವಾರಸುದಾರರ ಅನುಮತಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ಬೇರೆಬೇರೆಯವರು ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಬೇರೆಬೇರೆಯವರು ಎಂದರೆ ನಮ್ಮ ಕುಟುಂಬಕ್ಕೆ ಸಂಬಂಧಪಟ್ಟವರು ಇರುವುದಿಲ್ಲ. ಗ್ರಾಮ ಪಂಚಾಯತಿಗೆ ಬರೆದುಕೊಟ್ಟ ಬಾಂಡನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಸದರಿ ಬಾಂಡನ್ನು ನೊಂದಣಿ ಮಾಡಿ ಕೊಟ್ಟಿರುವುದಿಲ್ಲ. ಪಂಚಾಯತಿಯವರು ಯಾವುದೇ ಪರಿಹಾರವನ್ನು ಭೂಸ್ವಾಧೀನಕ್ಕೆ ಸಂಬಂಧಪಟ್ಟಂತೆ ನೀಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಪಂಚಾಯತಿಯವರು ರಸ್ತೆಗೆ ಮಣ್ಣು ಹಾಕಿ ಅಭಿವೃದ್ಧಿಪಡಿಸಿರುತ್ತಾರೆ ಎಂದರೆ ಸರಿ. ಆದರೆ ಯಾವಾಗ ಮಣ್ಣು ಹಾಕಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಈ ಬಗ್ಗೆ ಪಂಚಾಯಿತಿಯಿಂದ ದಾಖಲಾತಿಗಳನ್ನು ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. 5 ಅಡಿ ಅಗಲದ ರಸ್ತೆಗೆ ನಮ್ಮ ಜಮೀನನ್ನು ನಾವು ಸಾರ್ವಜನಿಕರಿಗೆ ಓಡಾಡಲು ಬಿಟ್ಟುಕೊಟ್ಟಿರುತ್ತೇವೆ ಎನ್ನುವ ವಿಚಾರವನ್ನು ನಮ್ಮ ವಕೀಲರಿಗೆ ದಾವೆ ದಾಖಲಿಸುವ ಸಮಯದಲ್ಲಿ ಹೇಳಿರುತ್ತೇನೆ. ನಾನು ಆಧರಿಸುವಂತೆ 5 ಅಡಿ ಅಗಲದ ರಸ್ತೆಗೆ ಜಮೀನನ್ನು ಬಿಟ್ಟುಕೊಟ್ಟಿರುವುದಿಲ್ಲ ಮತ್ತು ಹಾಗೆ ರಸ್ತೆಗೆ ಜಮೀನು ಬಿಟ್ಟುಕೊಡಲು ನನಗೆ ಯಾವುದೇ ಅಧಿಕಾರ ಹಿತಾಸಕ್ತಿ ವೈಯಕ್ತಿಕವಾಗಿ ಇರುವುದಿಲ್ಲ ಎಂದರೆ ಸರಿ.

3. ವಾದಿಯು ನಾನು ನಿರ್ಮಾಣ ಮಾಡಿದ ಮನೆಯ ಸುತ್ತಮುತ್ತ ಗಿಡಗಳು ಹಾಗೂ ತೆಂಗಿನ ಮರಗಳನ್ನು ನೆಟ್ಟಿರುತ್ತಾನೆ ಎಂದರೆ ಸರಿ. ವಾದಿಯು ನಿರ್ಮಾಣ ಮಾಡಿದ ಹೊಸ ಮನೆಯನ್ನು ವಾದಿ ಮತ್ತು ಆತನ ಹೆಂಡತಿ ಸೇರಿ ನಿರ್ಮಾಣ ಮಾಡಿರುತ್ತಾರೆ ಮತ್ತು ಅವರೇ ವಾಸವಾಗಿರುತ್ತಾರೆ ಎಂದರೆ ಸರಿ. ಈಗಾಗಲೆ ವಾದಿಯು ತಾನು ನಿರ್ಮಾಣ ಮಾಡಿದ ಮನೆಯನ್ನು ಪಾಲು ವಿಭಾಗ ಮಾಡುವ ಕಾಲಕ್ಕೆ ಆತನಿಗೆ ಬಿಟ್ಟುಕೊಡಲು ಯಾವುದೇ ತಕರಾರು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಜಮೀನು ಪಾಲು ಆಗಿರುವುದಿಲ್ಲ, ಕಾನೂನು ಬದ್ಧವಾಗಿ 3 ಹಿಸ್ಸೆಗಳು ಆದ ನಂತರ ವಾದಿಯು ಮನೆಯನ್ನು ನಿರ್ಮಾಣ ಮಾಡಿದ ಜಮೀನನ್ನು ಆತನ ಹಿಸ್ಸೆಗೆ ಅಂತಿಮ ಆದೇಶದಲ್ಲಿ ನೀಡಬಹುದು ಎಂದರೆ ಸರಿ. ನಾನು ಆಧರಿಸಿದಂತೆ ದಾವಾ ಆಸ್ತಿಯಲ್ಲಿ ಸಾರ್ವಜನಿಕರು ಓಡಾಡುವ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಾರ್ವಜನಿಕ ರಸ್ತೆಯು ಅಸ್ತಿತ್ವದಲ್ಲಿ ಇರುತ್ತದೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.